


# ಶಿಷ್ಯ, ಶಿಕ್ಷಣ ಹಾಗೂ ಶಿಕ್ಷಕ

ಡಾ. ಡಿ.ಕೆ. ರಾಜೇಂದ್ರ

"ಶಿಕ್ಷಣವೇ ಎಲ್ಲ ಸಮಸ್ಯೆಗಳಿಗೂ ದಿವ್ಯೌಷಧ" ಎಂಬುದು ಸ್ವಾಮಿ ವಿವೇಕಾನಂದರ ಮಾತು. ಶಿಕ್ಷಣ ವ್ಯಕ್ತಿಯ ಸರ್ವತೋಮುಖ ವಿಕಾಸಕ್ಕೆ ಸಹಾಯಕವಾಗಿರುವಂತಿರಬೇಕೇ ಹೊರತು, ಕೇವಲ ತಲೆಯನ್ನು ತುಂಬಿ ಹೃದಯವನ್ನು ಖಾಲಿ ಮಾಡುವಂತಹ ವಿದ್ಯೆಯನ್ನು ಕಲಿಸುವುದಲ್ಲ. ಆದ್ದರಿಂದ ನಮಗಿಂದು ಅಗತ್ಯವಿರುವುದು "ವಿಷಯವನ್ನು ತಲೆಗೆ ತುರುಕದೆ ಮನಸ್ಸಿಗೆ ತರಬೇತಿ ನೀಡುವ ಲಕ್ಷಾಂತರ ಶಿಕ್ಷಕರ ಸೇವೆ" ಎಂದು ಸ್ವಾಮಿ ವಿವೇಕಾನಂದರು ಕರೆ ನೀಡುತ್ತಾರೆ.

ಆದರೆ, ಶಿಕ್ಷಣ ಕ್ಷೇತ್ರ ಇಂದು ವ್ಯಾಪಾರಿ ಕೇಂದ್ರದಂತಾಗಿದೆ. ಅದರ ಉದ್ದೇಶ ಮತ್ತು ದಿಕ್ಕೇ ಬದಲಾಗುತ್ತಿರುವ ಎಲ್ಲ ಲಕ್ಷಣಗಳೂ ದಟ್ಟವಾಗಿ ಗೋಚರಿಸುತ್ತಿವೆ. ಅದರ ಹಿನ್ನೆಲೆಯಾಗಿ ಸರಿಯಾದ ಗುರಿಯೂ ಇಲ್ಲ, ಮುನ್ನಡೆಸಲು ಸರಿಯಾದ ಗುರುವೂ ಇಲ್ಲ ಎಂಬಂತಹ ಸ್ಥಿತಿ ವ್ಯಾಪಕವಾಗಿ ಕಂಡುಬರುತ್ತಿರುವುದು ಅತ್ಯಂತ ಶೋಚನೀಯ ಸಂಗತಿ.

ಶಿಷ್ಯ ಸರಿಯಾಗಬೇಕಾದರೆ, ಶಿಕ್ಷಣ ಅರ್ಥಪೂರ್ಣವೆನಿಸಬೇಕಾದರೆ, ಶಿಕ್ಷಣವನ್ನು ನೀಡುವ ಶಿಕ್ಷಕ ಪ್ರಮುಖವಾಗುತ್ತಾನೆ. ಸ್ವಾಮಿ ವಿವೇಕಾನಂದರ ದೃಷ್ಟಿಯಲ್ಲಿ 'ಕೇವಲ ವಿಷಯಸಂಗ್ರಹ ಶಿಕ್ಷಣದ ಗುರಿಯಲ್ಲ.' ಹಾಗೆ ಸಂಗ್ರಹಿಸಿದ ವಿಷಯವನ್ನು ಸರಿಯಾದ ರೀತಿಯಲ್ಲಿ ಜೀರ್ಣಿಸಿಕೊಂಡು, ಜೀವನದಲ್ಲಿ ಅನುಷ್ಠಾನಕ್ಕೆ ತಂದುಕೊಂಡಾಗಲೇ ಅದು ನಿಜವಾದ ಶಿಕ್ಷಣ ವಾಗಲು ಸಾಧ್ಯ ಎಂಬುದು ಅವರ ಅಭಿಪ್ರಾಯ.

ಅಂದರೆ, ಶಿಕ್ಷಣ ಕೇವಲ ಬದುಕಿಗೆ ದಾರಿ ಮಾಡಿಕೊಟ್ಟರೆ ಸಾಲದು, ಅದು ವ್ಯಕ್ತಿತ್ವ ವಿಕಾಸಕ್ಕೆ ಪ್ರೇರಕವಾಗುವಂತಿರಬೇಕು. ವ್ಯಕ್ತಿಯಲ್ಲಿ ಆಗಲೇ ಇರುವ ಪರಿಪೂರ್ಣತೆಯ ಅಭಿವ್ಯಕ್ತಿಗೆ ಅದು ಕಾರಣವಾಗಬೇಕು. ನಾವು ಕಲಿಯುವ ವಿದ್ಯೆ ನಮ್ಮ ವ್ಯಕ್ತಿತ್ವದೊಂದಿಗೆ ಬೆರೆತು, ನಮ್ಮ ನಡೆನುಡಿಗಳಲ್ಲಿ ಅನಾವರಣಗೊಳ್ಳದ ಹೊರತು ಅದು ನಿಜವಾದ ವಿದ್ಯಾಭ್ಯಾಸವಾಗಲು ಸಾಧ್ಯವಿಲ್ಲ ಎಂಬುದು ಸ್ವಾಮಿ ವಿವೇಕಾನಂದರ ನುಡಿ. ಅವರೇ ಇದನ್ನು ಒಂದು ಒಳ್ಳೆಯ ಉದಾಹರಣೆಯ ಮೂಲಕ ವಿವರಿಸುತ್ತಾರೆ: "ಇಲ್ಲಿ ಒಂದು ಬೀಜವಿದೆ. ಆ ಬೀಜದಲ್ಲಿ ಮರವಾಗಿ ಬೆಳೆಯುವ ಸಾಮರ್ಥ್ಯ ಆಗಲೇ ಇದೆ. ನಾವದನ್ನು ನೆಲದಲ್ಲಿ ಬಿತ್ತಿ, ನೀರು, ಗೊಬ್ಬರ ಹಾಕುತ್ತೇವೆ. ಬೇರೆ ಪ್ರಾಣಿಗಳು ಅದನ್ನು ತಿನ್ನದಿರಲೆಂದು ಒಂದು ಬೇಲಿ ಕಟ್ಟುತ್ತೇವೆ. ಬೀಜ ತಾನಾಗಿಯೇ ಬೆಳೆದು ಗಿಡವಾಗಿ ಮರವಾಗುತ್ತದೆ. ಅದು ಬೆಳೆಯುವುದಕ್ಕೆ ನಾವೊಂದು ಅವಕಾಶವನ್ನು ಕಲ್ಪಿಸಿಕೊಡುತ್ತೇವಷ್ಟೇ. ಈ ಸ್ಕೂಲು, ಕಾಲೇಜು, ವಿಶ್ವವಿದ್ಯಾನಿಲಯ – ಇವುಗಳೆಲ್ಲ ಈ ಮಗು ಬೆಳೆಯುವುದಕ್ಕೆ, ಅಂದರೆ ತನ್ನೊಳಗಿನ ಶಕ್ತಿಯನ್ನು, ಪ್ರತಿಭೆಯನ್ನು, ಜ್ಞಾನವನ್ನು, ಪರಿಪೂರ್ಣತೆಯನ್ನು ಅಭಿವ್ಯಕ್ತಿಗೊಳಿಸುವುದಕ್ಕೆ ಕಲ್ಪಿಸಿರುವ ಅವಕಾಶಗಳು. ಗಿಡವನ್ನು ಸರಿಯಾಗಿ ಬೆಳೆಸಿದರೆ ಅದು ಆರೋಗ್ಯಕರವಾದ ಮರವಾಗಿ ಬೆಳೆದು ಉತ್ತಮ ಫಲವನ್ನು ನೀಡುವುದು. ಹಾಗೆಯೇ ಎಲ್ಲ ಶಿಕ್ಷಣಸಂಸ್ಥೆಗಳೂ ಸರಿಯಾದ ರೀತಿಯಲ್ಲಿ ಕೆಲಸ ಮಾಡಿದರೆ, ಉಪಾಧ್ಯಾಯರೆಲ್ಲಾ ನಿಷ್ಠೆಯಿಂದ ತಮ್ಮ ಕರ್ತವ್ಯವನ್ನು ಪಾಲಿಸಿದರೆ ಮಗುವೂ ಉತ್ತಮ ಪ್ರಜೆಯಾಗಿ ಬೆಳೆದು, ಸಮಾಜಕ್ಕೆ ಒಳಿತನ್ನು ಉಂಟುಮಾಡುತ್ತದೆ."

ಶಿಕ್ಷಣವು ಜ್ಞಾನವನ್ನು ವೃದ್ಧಿಗೊಳಿಸಿದರೆ ಸಾಲದು, ನೈತಿಕತೆ ಹಾಗೂ ಮಾನವೀಯತೆಗಳ ವೃದ್ಧಿಗೂ ಅದು ಕಾರಣವಾಗುವಂತಿರಬೇಕು. ಇದಕ್ಕೆ ಉತ್ತಮ ಶಿಕ್ಷಕನ ಅಗತ್ಯವಿದೆ. ಭಾರತೀಯ ಪರಂಪರೆಯಲ್ಲಿ ಗುರುವಿಗೆ ಮಹತ್ವದ ಸ್ಥಾನವಿದೆ. ಅಂತಹ ಗುರುವನ್ನು '**ಆಚಾರ್ಯ**' ಎಂದು ಗೌರವದಿಂದ ಕರೆಯಲಾಗುತ್ತಿತ್ತು. ವಿದ್ಯಾರ್ಥಿಯ ಭವಿಷ್ಯ ಅಂಥ ಗುರುಗಳ ಮೇಲೆಯೇ ನಿಂತಿದೆ. ಆದ್ದರಿಂದ ಈ ರೀತಿಯ ಸದ್ಗುಣಸಂಪನ್ನರಾದ ಆಚಾರ್ಯರನ್ನು ದೇಶ ಬಯಸುವುದು ಸಹಜವಾದದ್ದೇ.

ಶಿಕ್ಷಣದಲ್ಲಿ ಶಿಕ್ಷಕನ ಪಾತ್ರ ಮುಖ್ಯವಾದದ್ದು ಹಾಗೂ ಶ್ರೇಷ್ಠವಾದದ್ದು. ಮಹಾತ್ಮ ಗಾಂಧೀಜಿಯವರು ಇದನ್ನು ಕುರಿತು ತಮ್ಮ ಅನುಭವವನ್ನು ಒಂದು ಕಡೆ ಹೀಗೆ ಹೇಳಿಕೊಂಡಿದ್ದಾರೆ: "ವಿದ್ಯಾರ್ಥಿಯ ಪೂರ್ಣ ಪಠ್ಯಪುಸ್ತಕವು ಶಿಕ್ಷಕನೇ ಎಂದು ನನಗನ್ನಿಸುತ್ತದೆ. ಪುಸ್ತಕಗಳಿಂದ ಬೋಧಿಸಿರುವ ವಿಷಯಗಳಲ್ಲಿ ನನಗೆ ನೆನಪಿರುವುದು ಅತ್ಯಲ್ಪ. ಆದರೆ ಅವರು ಪುಸ್ತಕಗಳಿಂದ ಬೇರೆಯಾಗಿ ಏನನ್ನು ಬೋಧಿಸಿರುವರೋ ಅವುಗಳ ನೆನಪು ಈಗಲೂ ನನಗೆ ಚೆನ್ನಾಗಿದೆ."


ಶಿಕ್ಷಕ ನಿಜಕ್ಕೂ '**ಆಚಾರ್ಯ**' ಸ್ಥಾನಕ್ಕೆ ಏರಿ ಶಿಕ್ಷಣವನ್ನು ನೀಡಿದಾಗ ಮಾತ್ರ ವಿದ್ಯಾರ್ಥಿಯನ್ನು ದೇಶದ ಉತ್ತಮ ಪ್ರಜೆಯನ್ನಾಗಿ, ಜವಾಬ್ದಾರಿಯುತ ನಾಗರಿಕನನ್ನಾಗಿ ರೂಪಿಸಲು ಸಾಧ್ಯ. ಶಿಕ್ಷಕ ತನ್ನ ಪರಿಶುದ್ಧ ವ್ಯಕ್ತಿತ್ವದ ಮೂಲಕ ವಿದ್ಯಾರ್ಥಿಯ ಮನಸ್ಸನ್ನು ಗೆಲ್ಲುವುದೇ ಮುಖ್ಯವಾಗುತ್ತದೆ. ಮಾಹಿತಿಯನ್ನು ತುಂಬುವುದಷ್ಟೇ ಶಿಕ್ಷಕನ ಕೆಲಸವಲ್ಲ. ಅದರ ಜೊತೆಗೆ **ಭಾವ** ಹಾಗೂ **ಶೀಲ**ಗಳನ್ನು ತುಂಬುವ ಕಾರ್ಯವೂ ಆಗಬೇಕು.

ಹಾಗಾಗಿ ರಾಮಕೃಷ್ಣ ಪರಮಹಂಸರು ಮೂರು ಬಗೆಯ ಶಿಕ್ಷಕರನ್ನು ಗುರುತಿಸುತ್ತಾರೆ. ಅವರನ್ನು ಮೂರು ಬಗೆಯ ವೈದ್ಯರಿಗೆ ಹೋಲಿಸುತ್ತಾರೆ. ಸಾಮಾನ್ಯ ವೈದ್ಯನು ರೋಗವನ್ನು ಗುರುತಿಸಿ ರೋಗಿಗೆ ಔಷಧವನ್ನು ಕೊಡುತ್ತಾನೆ. ಮುಂದಿನದುದರ ಬಗ್ಗೆ ಆತ ತಲೆ ಕೆಡಿಸಿಕೊಳ್ಳುವುದಿಲ್ಲ. ಮಧ್ಯಮವರ್ಗದ ವೈದ್ಯ ರೋಗಿಯನ್ನು ಪರೀಕ್ಷಿಸಿ ಔಷಧ ಕೊಡುವುದರ ಜೊತೆಗೆ, ಅದರ ಪರಿಣಾಮದ ಬಗ್ಗೆಯೂ ಗಮನ ಹರಿಸಿ ವಿಚಾರಿಸಿಕೊಳ್ಳುತ್ತಾನೆ. ಇನ್ನು ಮೂರನೆಯ ವರ್ಗದ ವೈದ್ಯ ಇವರಿಬ್ಬರಿಗಿಂತ ಮುಂದೆ ಹೋಗಿ, ರೋಗಿಯನ್ನು ಹೆಜ್ಜೆಹೆಜ್ಜೆಗೂ ಗಮನಿಸುತ್ತಾ ರೋಗ ಗುಣಹೊಂದುವವರೆಗೂ ಎಚ್ಚರ ವಹಿಸುತ್ತಾನೆ.

ಶಿಕ್ಷಕರಲ್ಲಿಯೂ ಇಂತಹ ವರ್ಗಗಳು ಎದ್ದುಕಾಣುತ್ತವೆ. 'ಪಾಠ ಮಾಡಿ ತನ್ನ ಕೆಲಸ ಆಯಿತು' ಎಂದು ಕೈಕಟ್ಟಿ ಕೂರುವುದರಿಂದ ವಿದ್ಯಾರ್ಥಿಯ ಭವಿಷ್ಯ ರೂಪುಗೊಳ್ಳುವುದಿಲ್ಲ. ಗುರು ತನ್ನ ವ್ಯಕ್ತಿತ್ವದ ಪ್ರಭಾವದಿಂದ ಅವನಲ್ಲಿ ಶಕ್ತಿ ತುಂಬುವಂತಾಗಬೇಕು. ವ್ಯಕ್ತಿತ್ವ ನಿರ್ಮಾಣಕ್ಕೆ ಕಾರಣವಾಗುವಂತಾಗಬೇಕು. ಏಕೆಂದರೆ, ಒಳ್ಳೆಯ ಶಿಕ್ಷಕನಿಲ್ಲದ ಶಿಕ್ಷಣಕ್ಷೇತ್ರ ದೇವರಿಲ್ಲದ ಗುಡಿಯಂತೆ, ಹೃದಯವಂತಿಕೆ ಇಲ್ಲದ ವ್ಯಕ್ತಿತ್ವದಂತೆ.

ನೈತಿಕತೆ, ಜೀವನಮೌಲ್ಯ, ಸ್ಫೂರ್ತಿ, ಆತ್ಮವಿಶ್ವಾಸ – ಇವುಗಳನ್ನು ತುಂಬದ ಶಿಕ್ಷಣ ಹಾಗೂ ಶಿಕ್ಷಕ, ವಿದ್ಯಾರ್ಥಿಗಳನ್ನು ಕೇವಲ ನಡೆದಾಡುವ ಗ್ರಂಥಾಲಯಗಳನ್ನಾಗಿ ಸೃಷ್ಟಿಸಿದಂತಾಗುತ್ತದೆ. ಇದರಿಂದ ಏನು ತಾನೇ ಪ್ರಯೋಜನ?

# ಶ್ರೀಮದ್ಭಾಗವತ ಸಾರ



ಶುಕಾಚಾರ್ಯರಿಂದ ಭಾಗವತ ಬೋಧನೆ (ಸಾಂಪ್ರದಾಯಿಕ ಚಿತ್ರ)

ಎ. ಮುರಳೀಧರ

**ಭಾಗವತವು ಪುರಾಣಗಳಲ್ಲೆಲ್ಲಾ ರತ್ನಪ್ರಾಯವಾದುದು. ಭಕ್ತಿ–ಜ್ಞಾನಗಳ ಅಪೂರ್ವ ಸಂಗಮವನ್ನು ನಾವು ಇಲ್ಲಿ ಕಾಣುತ್ತೇವೆ. ಹಲವಾರು ಭಕ್ತಶಿರೋಮಣಿಗಳ ಅಪೂರ್ವ ಕಥನದೊಂದಿಗೆ ಭಗವದ್ಭಕ್ತಿ ಮತ್ತು ಭಗವಲ್ಲೀಲೆಗಳು ಸುಮನೋಹರವಾಗಿ ಈ ಗ್ರಂಥದಲ್ಲಿ ನಿರೂಪಿಸಲ್ಪಟ್ಟಿವೆ. ಇಂಥ ಅಪೂರ್ವಕೃತಿಯ ಸಂಕ್ಷಿಪ್ತ ರೂಪವನ್ನು ಈ ಸಂಚಿಕೆಯಿಂದ ನಾವು ನೀಡುತ್ತಿದ್ದೇವೆ. ಈ ಸಂಗ್ರಹಕಾರ್ಯವನ್ನು ಮಾಡಿಕೊಟ್ಟಿರುವ ಮಾನ್ಯ ಲೇಖಕರು ಭದ್ರಾವತಿಯ ಕಾಗದ ಕಾರ್ಖಾನೆಯಲ್ಲಿ ಕೆಲಸಮಾಡುತ್ತಿದ್ದಾರೆ. ಇವರು ಬರೆದಿರುವ ಸಣ್ಣಕಥೆಗಳು ಹಲವಾರು ಪತ್ರಿಕೆಗಳಲ್ಲಿ ಪ್ರಕಟವಾಗಿವೆ; ಆಕಾಶವಾಣಿಯಲ್ಲಿಯೂ ಬಿತ್ತರಗೊಂಡಿವೆ. ಅಂತಹ ಒಂದು ಕತೆಗೆ ಬಹುಮಾನವೂ ಪ್ರಾಪ್ತವಾಗಿದೆ. ಆಚಾರ್ಯತ್ರಯರ ಮೇಲಿನ ಅವರ ಲೇಖನವು ಸ್ಥಳೀಯ ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟಗೊಂಡಿದೆ.**

## ಹಿನ್ನೆಲೆ

ಶ್ರೀಮದ್ಭಾಗವತವು ಭಗವಂತನ ಮತ್ತು ಆತನ ಭಕ್ತರ ವಿಸ್ತೃತ ಚರಿತ್ರೆಗಳ ದಾಖಲೆಗಳಿರುವ ಮಹಾಗ್ರಂಥವಾಗಿದೆ. ಅದು ವೇದಗಳೆಂಬ ಕಲ್ಪವೃಕ್ಷದಲ್ಲಿ ಬಿಟ್ಟ ಪಕ್ವವಾದ ದಿವ್ಯ ರಸಫಲವಾಗಿದೆ. ಸಜ್ಜನರು, ಸಾತ್ವಿಕರು ತಮ್ಮ ಮುಕ್ತಿ ಸಾಧನೆಗಾಗಿ ಇದರಲ್ಲಿನ ಭಕ್ತಿರಸವನ್ನು ಯಾವಾಗಲೂ ಸವಿಯುತ್ತಿರುತ್ತಾರೆ. ಇದನ್ನು ಸವಿದಷ್ಟೂ ಮನಸ್ಸು ಮತ್ತೆ ಮತ್ತೆ ಸವಿಯಬಯಸುತ್ತದೆ. ವೇದ, ಉಪನಿಷತ್ತುಗಳನ್ನು ಅರಗಿಸಿಕೊಳ್ಳಲಾರದವರಿಗೆ ಈ ಭಾಗವತ ಗ್ರಂಥವೇ ಮುಕ್ತಿಯ ಸಾಧನವಾಗಿದ್ದು, ಮೋಕ್ಷದ ಮಾರ್ಗವಾಗಿದೆ. ಇದು ಶುಕಾಚಾರ್ಯರ ವಾಣಿಯಲ್ಲಿ ಅಮೃತ ಸಮಾನವಾದ ದಿವ್ಯರಸವನ್ನು ಸ್ರವಿಸುತ್ತಿರುವುದು. ಸಜ್ಜನರು ಇದರ ಮಧುರ ರಸವನ್ನು, ಶರೀರದಲ್ಲಿ ಚೈತನ್ಯ ಇರುವವರೆಗೂ ಬಾರಿಬಾರಿಗೂ ಆಸ್ವಾದಿಸುತ್ತಿರುತ್ತಾರೆ. ಭಾಗವತದ ಬೋಧನೆ ಇಡೀ ಬಾಳಿಗೆ – ಆರಂಭದಿಂದ ಅಂತ್ಯದವರೆಗೂ – ನಂದಾ ದೀಪವಾಗಿದೆ.

ಕಲಿಯುಗದಲ್ಲಿ, ಕಲಿಯ ಮಹಿಮೆಯಿಂದಾಗಿ ಯಜ್ಞ ಯಾಗಾದಿಗಳನ್ನು ಮತ್ತು ಧಾರ್ಮಿಕ ಚಟುವಟಿಕೆಗಳನ್ನು ನೆರವೇರಿಸಲು ಮನಸ್ಸು ಬರುವುದಿಲ್ಲ. ಜೀವಿಗಳ ಬದುಕೇ ದುಸ್ತರವಾಗಿದೆ, ಇನ್ನು ಧಾರ್ಮಿಕ ವಿಧಿ ಆಚರಣೆಗಳಂತೂ ಬಹುದೂರವೇ ಸರಿ. ಆದರೆ ಧ್ಯಾನದಿಂದ, ಭಕ್ತಿಯುತ ಸಮರ್ಪಣಾಭಾವದಿಂದ ಭಾಗವತದ ಶ್ರವಣ, ಮನನ ಪಠಣ ಮಾಡುವುದರಿಂದ ಜೀವಿಯು ಮುಕ್ತನಾಗುವನು. ಏಕೆಂದರೆ, ಶ್ರೀಕೃಷ್ಣನು ತನ್ನ ಭಕ್ತನಾದ ಉದ್ಧವನಿಗೆ, "ನಾನೇ ಕಲಿಯುಗದಲ್ಲಿ ಭಾಗವತದ ಗ್ರಂಥದಲ್ಲಿ ನೆಲೆಸಿರುತ್ತೇನೆ. ಭಾಗವತವನ್ನು ತಿಳಿದವರು ನನ್ನನ್ನೂ ತಿಳಿದಂತೆ. ಭಾಗವತದ ಬೆಳಕು ಜೀವನ್ಮುಕ್ತಿಗೆ ಬೆಳಕನ್ನು ತೋರಿಸುತ್ತದೆ. ಭಾಗವತವು ಅರಿಷಡ್ವರ್ಗಗಳನ್ನು ನಿವಾರಣೆ ಮಾಡಿ ಶಕ್ತಿ–ಮುಕ್ತಿಗಳನ್ನು ದಯಪಾಲಿಸುತ್ತದೆ" ಎಂದು ಘೋಷಿಸಿದ್ದಾನೆ.

ನಮಗಿಂದು ಅಜ್ಞಾನದ ಕತ್ತಲು ಕವಿದಿದೆ. ಸಾತ್ವಿಕರನ್ನು ಉದ್ಧರಿಸಲು, ಜ್ಞಾನಪ್ರಸಾರಕ್ಕಾಗಿಯೇ ಶ್ರೀಮನ್ನಾರಾಯಣನು ವೇದವ್ಯಾಸರಾಗಿ ಜನ್ಮತಾಳಿದನು. ವೇದವ್ಯಾಸರು ಭಕ್ತರಿಗೆ ಜ್ಞಾನದ ಬೆಳಕು ತರುವುದಕ್ಕಾಗಿಯೇ ಅವತರಿಸಿದ್ದಾರೆ. ಮೊದಲು ಅವರು ವೇದಗಳನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿದರು. ನಂತರ ವೇದಗಳ ತಾತ್ತ್ವಿಕ ವಿಷಯಗಳನ್ನು ಉಪನಿಷತ್ತುಗಳಲ್ಲಿ ಸಂಗ್ರಹಿಸಿದರು. ವೇದಗಳ ಮತ್ತು ಉಪನಿಷತ್ತುಗಳ ಸಾರವನ್ನು ತಿಳಿಹೇಳಲು ಬ್ರಹ್ಮ, ಪದ್ಮ, ವಿಷ್ಣು, ವಾಯು, ಭಾಗವತ, ನಾರದೀಯ, ಮಾರ್ಕಂಡೇಯ, ಅಗ್ನಿ, ಭವಿಷ್ಯ, ಬ್ರಹ್ಮವೈವರ್ತ, ಲಿಂಗ, ವರಾಹ, ಸ್ಕಂದ, ವಾಮನ, ಕೂರ್ಮ, ಮತ್ಸ್ಯ, ಗರುಡ, ಬ್ರಹ್ಮಾಂಡ – ಹೀಗೆ ಹದಿನೆಂಟು ಪುರಾಣಗಳನ್ನು ರಚನೆ ಮಾಡಿದರು. ಇವುಗಳಲ್ಲಿ ಶ್ರೀಮದ್ಭಾಗವತ ಪುರಾಣ ಶ್ರೇಷ್ಠವಾದದ್ದು. ಇದನ್ನು ನಾರದರ ಪ್ರಾರ್ಥನೆಯ ಮೇರೆಗೆ ವೇದವ್ಯಾಸರು ರಚಿಸಿದರು.

ಭಾಗವತ ಗ್ರಂಥವು ಪ್ರಶ್ನೋತ್ತರ ರೂಪದಲ್ಲಿದೆ. ಸೂತ ಪುರಾಣಿಕರು ಶೌನಕ ಮುನಿಗಳಿಗೆ ಇದನ್ನು ಹೇಳಿದರು. ಇದನ್ನೇ ಮೈತ್ರೇಯ ಮಹಾಮುನಿಗಳು ವಿದುರನಿಗೆ ಹೇಳಿದರು. ಈ ಭಾಗವತವನ್ನೇ ಶುಕಾಚಾರ್ಯರು ಪರೀಕ್ಷಿತ ರಾಜನಿಗೆ

ಹೇಳಿದರು. ಭಾಗವತದ ಉಗಮವಾದ್ದು ಹೀಗೆ ಎಂಬ ನಂಬಿಕೆ ಇದೆ: ಶ್ರೀಮನ್ನಾರಾಯಣನು ತನ್ನ ನಾಭಿಕಮಲದಿಂದ ಉದಿಸಿದ ಬ್ರಹ್ಮದೇವರನ್ನು ಅನುಗ್ರಹಿಸಲು ಮತ್ತು ಜ್ಞಾನದ ಬೋಧನೆಗಾಗಿ ನಾಲ್ಕೇ ಶ್ಲೋಕಗಳಲ್ಲಿ ಭಾಗವತವನ್ನು ಆತನಿಗೆ ಬೋಧಿಸಿದನು. ಬ್ರಹ್ಮದೇವರು ಇದನ್ನು ತಮ್ಮ ಪುತ್ರರಾದ ಸನಕಾದಿಗಳಿಗೆ ಉಪದೇಶಿಸಿದರು. ಸನಕಾದಿಗಳು ನಾರದರಿಗೆ ತಿಳಿಹೇಳಿದರು. ದ್ವಾಪರಯುಗದಲ್ಲಿ ಜ್ಞಾನಪ್ರಸಾರ ಕಾರ್ಯಕ್ಕಾಗಿಯೇ ಅವತರಿಸಿದ ವೇದವ್ಯಾಸರು ಜನರಿಗೆ ವೇದಗಳ, ಉಪನಿಷತ್ತುಗಳ ತಿಳುವಳಿಕೆಯನ್ನು ನೀಡಿದರು. ಭಗವಂತನ ಬಗ್ಗೆ ಇನ್ನೂ ಹೇಳುವುದೇನೋ ಇದೆ ಎಂದೆನಿಸಿ ಯೋಚಿಸುತ್ತಿದ್ದಾಗ, ನಾರದರು ಅವರನ್ನು ಕಾಣಲು ಬಂದರು. ಅವರು ಭಾಗವತದ ಬಗ್ಗೆ ತಿಳಿಸಿ, ಕಲಿಯುಗದಲ್ಲಿ ಜನಿಸುವ ಸಾತ್ವಿಕರ ಸಾಧನೆಗಾಗಿ ಅದನ್ನು ಗ್ರಂಥರೂಪದಲ್ಲಿ ದಾಖಲಿಸುವಂತೆ ಕೋರಿದರು. ವೇದವ್ಯಾಸರು, ಭಾಗವತ ಗ್ರಂಥ ರಚನೆ ಮಾಡಿ, ಅದರ ಉಪದೇಶ ನೀಡಲು ಸರಿಯಾದ ಒಬ್ಬ ವ್ಯಕ್ತಿಯನ್ನು ಅರಸುತ್ತಿದ್ದರು.

ಒಮ್ಮೆ ವ್ಯಾಸರ ಪುತ್ರರಾದ ಶುಕಾಚಾರ್ಯರು ದೇವರ ಧ್ಯಾನದಲ್ಲಿ ಮೈಮರೆತು ಯಾವುದೇ ವಸ್ತ್ರವನ್ನು ಧರಿಸದೇ ಹೋಗುತ್ತಿದ್ದರು. ಅದೇ ವೇಳೆಯಲ್ಲಿ, ಕೊಳದಲ್ಲಿ ಸ್ನಾನ ಮಾಡುತ್ತಿದ್ದ ಸ್ತ್ರಿಯರು ಇವರನ್ನು ಕಂಡು ಎಳ್ಳಷ್ಟೂ ಸಂಕೋಚವಿಲ್ಲದೆ ನಮಸ್ಕರಿಸಿದರು. ಅದೇ ವೇಳೆಯಲ್ಲಿ ಶುಕಾಚಾರ್ಯರನ್ನು ಹಿಂಬಾಲಿಸಿ ಬರುತ್ತಿದ್ದ ವೇದವ್ಯಾಸರನ್ನು ಕಂಡು, ತಕ್ಷಣವೇ ವಸ್ತ್ರಗಳನ್ನು ಧರಿಸಿಕೊಂಡು ಬದಿಗೆ ಸರಿದರು. ವೇದವ್ಯಾಸರು ಆ ಸ್ತ್ರೀಯರಲ್ಲಿ ಇದರ ಬಗ್ಗೆ ವಿಚಾರಿಸಿದರು. ಆಗ ಅವರೆಲ್ಲ, "ಶುಕಾಚಾರ್ಯರು ಭಗವದ್ಭಕ್ತರಾಗಿದ್ದಾರೆ. ಅವರು ಎಲ್ಲರಲ್ಲಿಯೂ, ಎಲ್ಲೆಡೆಯಲ್ಲಿಯೂ ಭಗವಂತನನ್ನೇ ಕಾಣುತ್ತಾರೆ. ಅರಿಷಡ್ವರ್ಗಗಳನ್ನು ಜಯಿಸಿದ್ದಾರೆ ಎಂಬುದೇ ನಮ್ಮ ಭಾವನೆಯಾಗಿದೆ" ಎಂದು ತಿಳಿಸಿದರು. ಈ ಘಟನೆಯನ್ನು ಸೂಕ್ಷ್ಮವಾಗಿ ಅವಲೋಕಿಸಿದ ವೇದವ್ಯಾಸರು ಭಾಗವತವನ್ನು ಉಪದೇಶಿಸಲು ತಮ್ಮ ಮಗನಾದ ಶುಕಾಚಾರ್ಯರೇ ಅರ್ಹರೆಂದು ಅರಿತು ಭಾಗವತವನ್ನು ಅವರಿಗೇ ಉಪದೇಶಿಸಿದರು. ಶುಕಾಚಾರ್ಯರು ಪರೀಕ್ಷಿತ ರಾಜನ ಮುಕ್ತಿಗಾಗಿ ಇದನ್ನು ಉಪದೇಶಿಸಿದರು. ಈ ಭಾಗವತವೇ ಇಂದಿಗೂ ಪ್ರಸಾರದಲ್ಲಿದೆ.

ಶ್ರೀಮದ್ಭಾಗವತವು ಭೂಲೋಕದಲ್ಲಿ ಪ್ರಸಾರವಾದುದಕ್ಕೆ ಮತ್ತೊಂದು ಸಂಪ್ರದಾಯಮಾರ್ಗವೂ ಪ್ರಸಿದ್ಧವಾಗಿದೆ. ಶ್ರೀಮನ್ನಾರಾಯಣನು ಬ್ರಹ್ಮದೇವರಿಗೆ ಭಾಗವತವನ್ನು ಉಪದೇಶಿಸುವಾಗ ಅಲ್ಲಿಯೇ ಇದ್ದ ಆದಿಶೇಷನು ಕೇಳಿಸಿಕೊಂಡನು. ಇದನ್ನು ಅವನು ಸನತ್ಕುಮಾರರಿಗೆ ಹೇಳಿದನು. ಸನತ್ಕುಮಾರರು ಸಂಜಯನಿಗೂ, ಸಂಜಯನು ಪರಾಶರ ಮುನಿಗಳಿಗೂ ಹೇಳಿದರು. ಪರಾಶರ ಮುನಿಗಳು ಮೈತ್ರೇಯ ಮುನಿಗಳಿಗೆ ಮತ್ತು ಮೈತ್ರೇಯ ಮಹಾಮುನಿಗಳು ಇದನ್ನು ವಿದುರನಿಗೆ ಉಪದೇಶಿಸಿದರು.

ಆಧುನಿಕ ಇತಿಹಾಸಕಾರರು ಭಾಗವತ ಗ್ರಂಥವು ಕ್ರಿಸ್ತಶಕ ೫ನೇ ಶತಮಾನದಿಂದ ೧೫ನೇ ಶತಮಾನದ ಒಳಗಿನ ಕಾಲಮಾನದಲ್ಲಿ ರಚಿತವಾಗಿರಬಹುದೆಂದು ಅಭಿಪ್ರಾಯ ಪಡುತ್ತಾರೆ. ಈ ಗ್ರಂಥದ ಬಗ್ಗೆ ಭಕ್ತಿಭಾವ ಬೆಳೆಯಲೆಂಬ ಉದ್ದೇಶದಿಂದ ಅದರ ರಚನಕಾರರಾಗಿ ವೇದವ್ಯಾಸರನ್ನು ಹೆಸರಿಸಿದ್ದಾರೆಂದು ಅವರ ಅಭಿಪ್ರಾಯವಾಗಿದೆ. ಅದರಲ್ಲೂ ಕೆಲವು ವಿದ್ವಾಂಸರು ಈ ಗ್ರಂಥವು ಹೆಚ್ಚೆಂದರೆ, ದಕ್ಷಿಣಭಾರತದಲ್ಲಿದ್ದ ಶ್ರೀವೈಷ್ಣವ ಸಂಪ್ರದಾಯದ ಆಳ್ವಾರರ ಕಾಲದಲ್ಲಿ ರಚಿತವಾಗಿರಬಹುದೆಂದು ಊಹಿಸುತ್ತಾರೆ. ಆಳ್ವಾರರ ಕಾಲದಲ್ಲಿ ಭಾಗವತವು ಜನಸಾಮಾನ್ಯರಲ್ಲಿ ಅತಿಕ್ಷಿಪ್ರವಾಗಿ ಪ್ರಸಾರಗೊಂಡಿತು.

ವಾಸುದೇವ ಕೃಷ್ಣನಿಗೆ ಮುಡುಪಾದ ಭಾಗವತ ಪರಂಪರೆಯಲ್ಲಿ ಭಕ್ತಿಯೇ ವಿಶೇಷವಾದದ್ದು. ಕೃಷ್ಣನ ಚರಿತ್ರೆಯಲ್ಲಿ ಧರ್ಮ, ಕರ್ಮ ಎರಡೂ ಸೇರಿವೆ. ಶ್ರೀಕೃಷ್ಣನು ತನ್ನೆಲ್ಲ ಕಾರ್ಯಚಟುವಟಿಕೆಗಳಿಗೆ, ಧಾರ್ಮಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳ ಪರಂಪರೆಯನ್ನೇ ಅನುಸರಿಸಿದನು. ಇದೇ ಭಾಗವತದ ಮಾರ್ಗವೂ ಆಗಿದೆ. ಭಾಗವತ ಧರ್ಮವನ್ನು ಭಾರತದಲ್ಲೂ ಹಾಗೂ ಇನ್ನಿತರ ದೇಶಗಳಲ್ಲೂ ಅನುಸರಿಸುತ್ತಿದ್ದರೆಂಬುದಕ್ಕೆ, ಕ್ರಿ.ಪೂ. ೩–೪ನೇ ಶತಮಾನಕ್ಕೆ ಸೇರಿದ ಐತಿಹಾಸಿಕ ಪುರಾವೆಗಳು ಸಾಕಷ್ಟು ದೊರೆತಿವೆ.

ಅವಂತಿಯಲ್ಲಿದ್ದ (ಉಜ್ಜಯಿನಿ) ಗ್ರೀಕ್ ರಾಯಭಾರಿ ಹೆಲಿಯೋ ಮೋರಿಸ್ ಇಂದಿನ ಭೂಪಾಲ್ ಸಮೀಪದ ವಿದಿಶಾ ಎಂಬ ಸ್ಥಳದಲ್ಲಿ ಗರುಡಸ್ತಂಭವೊಂದನ್ನು ಸ್ಥಾಪಿಸಿದನು. ಇದರಲ್ಲಿ ಅವನು ವಾಸುದೇವನಲ್ಲಿಟ್ಟಿರುವ ಭಕ್ತಿಯ ಉಲ್ಲೇಖವಿದೆ. ಇದು ಕ್ರಿ.ಪೂ. ೩ನೇ ಶತಮಾನಕ್ಕೆ ಸೇರಿದ್ದಾಗಿದೆ. ಅಂದರೆ, ಎರಡುಸಾವಿರ ವರ್ಷಗಳ ಹಿಂದೆಯೇ ಭಾಗವತ ಪಂಥವು ಇತ್ತೆಂಬುದಕ್ಕೆ ಇದು ಸ್ಪಷ್ಟವಾದ ದಾಖಲೆಯಾಗಿದೆ. ಇಂಡೋ ಗ್ರೀಕ್ ರಾಜನಾದ ಅಗತಾಕ್ಲಿಸ್ ಎಂಬುವವನು ತನ್ನ ನಾಣ್ಯದ ಮೇಲೆ ವಾಸುದೇವನ ಸುದರ್ಶನ ಚಕ್ರ ಮತ್ತು ಬಲರಾಮನು ನೇಗಿಲನ್ನು ಹೊತ್ತಿರುವ ಚಿತ್ರವನ್ನು ಕೆತ್ತಿಸಿದ್ದಾನೆ.

ಭಾರತ ಸರ್ಕಾರದ ಸಮುದ್ರೀಯ ಪುರಾತತ್ತ್ವ ಇಲಾಖೆಯು ಗುಜರಾತಿನಲ್ಲಿ ನಡೆಸಿದ ಉತ್ಖನನದಿಂದ, ಶ್ರೀಕೃಷ್ಣನು ನೆಲೆಸಿದ್ದ ದ್ವಾರಕಾ ನಗರದ ಅವಶೇಷಗಳು ದೊರೆತಿವೆ. ಅಲ್ಲದೆ ಐತಿಹಾಸಿಕ ಪುರುಷರಾದ ಚಾಣಕ್ಯ, ಚಂದ್ರಗುಪ್ತರ ಉಲ್ಲೇಖ ಕೂಡ ಭಾಗವತದಲ್ಲಿ ಇದೆ. ಮಹಾಭಾರತ ಗ್ರಂಥವು ಐತಿಹಾಸಿಕ ಗ್ರಂಥವೆಂದು ದಾಖಲೆಗಳಿಂದ ರುಜುವಾತಾಗಿದೆ. ಅದೇ ರೀತಿ ಶ್ರೀಕೃಷ್ಣನ ಬಾಲ್ಯದ ಲೀಲೆಗಳನ್ನು ವಿವರಿಸುವ ಶ್ರೀಮದ್ಭಾಗವತ ಪುರಾಣವು ಕೂಡ ಐತಿಹಾಸಿಕ ಮತ್ತು ಪೌರಾಣಿಕ ಗ್ರಂಥವಾಗಿದೆ. ಈ ಗ್ರಂಥವು ಹಿಂದೆಯೂ, ಇಂದಿಗೂ ಹಾಗೂ ಮುಂದೆಯೂ ಸಾತ್ವಿಕ ಭಕ್ತರನ್ನು ಸಾಧನೆಯ ಹಾದಿಯಲ್ಲಿ ಮುನ್ನಡೆಸುವ ಪುಣ್ಯಗ್ರಂಥವಾಗಿದೆ. ಹೀಗಾಗಿ, ಭಾಗವತ ಗ್ರಂಥವು ನಮ್ಮ ಜನಜೀವನದಲ್ಲಿ ಭಕ್ತಿಚೈತನ್ಯವನ್ನು ತುಂಬುವ ಆಧ್ಯಾತ್ಮಿಕ ಚಿಲುಮೆಯಾಗಿದೆ ಎನ್ನುವುದರಲ್ಲಿ ಯಾವುದೇ ಸಂಶಯವಿಲ್ಲ.

## ಪ್ರಥಮ ಸ್ಕಂಧ

ಮಹಾಭಾರತ ಯುದ್ಧದ ನಂತರ, ಹಸ್ತಿನಾಪುರದ ಸಿಂಹಾಸನವನ್ನೇರಿದ ಧರ್ಮರಾಜನು ಶ್ರೀಕೃಷ್ಣನ ಅನುಗ್ರಹದಿಂದ ಧರ್ಮದಿಂದಲೇ ರಾಜ್ಯ ಪರಿಪಾಲನೆ ಮಾಡುತ್ತಿದ್ದನು. ಆದರೂ, ಅವನ ಮನಸ್ಸಿನಲ್ಲಿ ಏನೋ ಕಳವಳ, ಗೊಂದಲ ಮನೆಮಾಡಿತ್ತು. ಕೇವಲ ರಾಜ್ಯಕ್ಕೋಸ್ಕರ ಬಂಧುಗಳು, ಮಿತ್ರರು ಗುರುಗಳೆನ್ನದೆ, ಸಾವಿರಾರು ಮೃತಜನರ ಸಮಾಧಿಯ ಮೇಲೆ ತಾನು ರಾಜ್ಯವಾಳುತ್ತಿದ್ದೇನೆಂಬ ಕೊರಗು, ಚಿಂತೆಗಳು ಅವನನ್ನು ಯಾವಾಗಲೂ ಧೃತಿಗೆಡಿಸಿತ್ತು. ಹಿಂದೆಲ್ಲಾ ಆ ಮೃತಬಂಧುಗಳೊಡನೆ ಕಳೆದ ಕಾಲದ ಸವಿನೆನಪುಗಳನ್ನು ನೆನೆದು ನೆನೆದು ಅವನು ಮತ್ತಷ್ಟು ದುಃಖಪಡುತ್ತಿದ್ದನು.

ಶ್ರೀಕೃಷ್ಣನು, ವ್ಯಾಸ ಹಾಗೂ ಇನ್ನಿತರ ಹಿರಿಯರನ್ನೂ, ಹಾಗೆಯೇ ಧರ್ಮರಾಜನನ್ನೂ ಕುರುಕ್ಷೇತ್ರದ ರಣರಂಗದಲ್ಲಿ ಶರಪಂಜರದ ಮೇಲೆ ಮಲಗಿದ್ದ ಪಿತಾಮಹ ಭೀಷ್ಮಾಚಾರ್ಯರ ಬಳಿಗೆ ಕರೆದುಕೊಂಡು ಬಂದನು. ಭೀಷ್ಮಾಚಾರ್ಯರಿಂದಲೇ ಧರ್ಮರಾಜನಿಗೆ ರಾಜನೀತಿ, ಧರ್ಮ ಸಂಹಿತೆಗಳ ಬೋಧನೆ ಮಾಡಿಸಿದನು. ಅಲ್ಲದೆ, ಕುರುಕ್ಷೇತ್ರ ಯುದ್ಧವು ಧರ್ಮಯುದ್ಧ ಎಂದು ಅವನಿಗೆ ಮನವರಿಕೆ ಮಾಡಿಸಿದನು. ಧರ್ಮರಾಜನ ಎಲ್ಲ ಪ್ರಶ್ನೆಗಳಿಗೂ, ಭೀಷ್ಮಾಚಾರ್ಯರು ನಿಖರವಾದ ಉತ್ತರವಿತ್ತರು. ಮಹಾಭಾರತ ಯುದ್ಧವು ನ್ಯಾಯಸಮ್ಮತವಾದ್ದರಿಂದ ಪಾಂಡವರಿಗೆ ಇದರಿಂದ ಯಾವ ದೋಷವೂ ತಟ್ಟುವುದಿಲ್ಲ ಎಂದು ಅವರು ತಿಳಿಸಿದರು. ಧರ್ಮರಾಜನ ಮನಸ್ಸಿಗೆ ಇದರಿಂದ ಎಷ್ಟೋ ನೆಮ್ಮದಿ ದೊರೆಯಿತು. ಇಚ್ಛಾಮರಣಿಗಳಾದ ಭೀಷ್ಮಾಚಾರ್ಯರು ಎಲ್ಲ ಬಂಧುವರ್ಗದವರೂ ನೋಡುತ್ತಿರುವಾಗಲೇ ದೇಹತ್ಯಾಗ ಮಾಡಿದರು. ಪಾಂಡವರು ಅವರ ಮರಣಕ್ಕೆ ದುಃಖಿಸಿದರು. ಅವರ ಸಂಸ್ಕಾರ ಮಾಡಿ ಹಸ್ತಿನಾವತಿಗೆ ಬಂದರು. ಶ್ರೀಕೃಷ್ಣನು ಸ್ವಲ್ಪ ದಿನಗಳ ಕಾಲ ಹಸ್ತಿನಾಪುರದಲ್ಲಿ ಇದ್ದು, ನಂತರ ದ್ವಾರಕೆಗೆ ಹಿಂತಿರುಗಿದನು. ದ್ವಾರಕೆಯಲ್ಲಿ ನಾಗರಿಕರು, ಪತ್ನಿಪುತ್ರರು – ಎಲ್ಲರೂ ಕೃಷ್ಣನ ಆಗಮನದಿಂದ ಸಂತಸಗೊಂಡರು.

ಏತನ್ಮಧ್ಯೆ ಮಹಾಭಾರತ ಯುದ್ಧದಲ್ಲಿ ಭಾಗವಹಿಸದೆ, ಕೌರವರ ಅನ್ಯಾಯವನ್ನು ಖಂಡಿಸಿ ತೀರ್ಥಯಾತ್ರೆಗೆ ತೆರಳಿದ್ದ ವಿದುರನು ಹಸ್ತಿನಾಪುರಕ್ಕೆ ಹಿಂತಿರುಗಿದನು. ಧರ್ಮರಾಜನು ವಿದುರನನ್ನು ಆದರದಿಂದ ಬರಮಾಡಿಕೊಂಡು ಗೌರವಿಸಿ ಸತ್ಕರಿಸಿದನು. ಅರಮನೆಯಲ್ಲಿಯೇ ಇರುವಂತೆ ವಿನಂತಿಸಿಕೊಂಡನು. ವಿದುರನು ಧೃತರಾಷ್ಟ್ರನ ಬಳಿಗೆ ತೆರಳಿದನು. ಧೃತರಾಷ್ಟ್ರ ಮತ್ತು ಗಾಂಧಾರಿಗೆ ಧರ್ಮದ ಬಗ್ಗೆ ತಿಳಿಯಹೇಳಿ, ವಿರಕ್ತರಾಗಿ ಜೀವನ ನಡೆಸುವಂತೆ ಬೋಧಿಸಿದನು. ತಾನೂ ನಿಮ್ಮೊಂದಿಗೆ ಅರಣ್ಯಕ್ಕೆ ತಪಸ್ಸು ಮಾಡಲು ಬರುತ್ತೇನೆಂದು ತಿಳಿಸಿದನು. ನಂತರ ಮೂವರೂ ಸೇರಿ ಚಿಂತಿಸಿ, ಯಾರಿಗೂ ಹೇಳದೆ ಅದೇ ದಿನ ರಾತ್ರಿ ಅರಮನೆಯನ್ನು ಬಿಟ್ಟು ಅರಣ್ಯದ ದಾರಿ ಹಿಡಿದರು.

ಪ್ರತಿದಿನವೂ ಹಿರಿಯರಾದ ಧೃತರಾಷ್ಟ್ರ ಮತ್ತು ಗಾಂಧಾರಿಯರ ದರ್ಶನ ಮಾಡಿ ನಮಸ್ಕಾರ ಮಾಡುವ ಪದ್ಧತಿಯನ್ನು ಧರ್ಮರಾಯನು ಇಟ್ಟುಕೊಂಡಿದ್ದನು. ಅಂದು ಬೆಳಗ್ಗೆ ಅವರ ಅರಮನೆಗೆ ಬಂದಾಗ ಅಲ್ಲಿ ಯಾರೂ ಇರದಿದ್ದನ್ನು ಕಂಡು ಚಿಂತಿತನಾದನು. ಅಷ್ಟರಲ್ಲಿ ನಾರದಮುನಿಗಳು ಅಲ್ಲಿಗೆ ಬಂದರು. ಧರ್ಮರಾಜನಿಗೆ ಸಮಾಧಾನ ಮಾಡಿದರು. ಧೃತರಾಷ್ಟ್ರ, ಗಾಂಧಾರಿ ಮತ್ತು ವಿದುರ – ಈ ಮೂವರೂ ತಪಸ್ಸಿಗಾಗಿ ಅರಣ್ಯಕ್ಕೆ ತೆರಳಿದ್ದಾರೆಂದು ತಿಳಿಸಿದರು.

ದ್ವಾರಕೆಗೆ ತೆರಳಿದ್ದ ಅರ್ಜುನನು ಹಿಂತಿರುಗಿ ಬರಲಿಲ್ಲವೆಂದು ಧರ್ಮರಾಜನು ಚಿಂತಿಸುತ್ತಿದ್ದನು. ಅಷ್ಟರಲ್ಲಿಯೇ ದುಃಖದಿಂದ ಕೂಡಿದ ಅರ್ಜುನನು ಧರ್ಮರಾಜನ ಎದುರಿಗೆ ಬಂದು ನಿಂತನು. ಅವನು ಧಾರಾಕಾರವಾಗಿ ಕಣ್ಣೀರು ಸುರಿಸುತ್ತಿದ್ದನು. ಏನಾಯಿತು ಎಂದು ಕೇಳಿದ ಧರ್ಮರಾಜನಿಗೆ, "ಅಣ್ಣಾ, ಕೃಷ್ಣನು ಪರಂಧಾಮಕ್ಕೆ ತೆರಳಿದನು" ಎಂದು ಅರ್ಜುನನು ತಿಳಿಸಿದನು. ಆಮೇಲೆ ನಡೆದ ಘಟನೆಯನ್ನು ಹೀಗೆ ಬಣ್ಣಿಸಿದನು:

"ದ್ವಾರಕೆಯಲ್ಲಿದ್ದ ಸಕಲ ಸಂಪತ್ತುಗಳು, ದನ–ಕರುಗಳು, ಜೊತೆಗೆ ಯಾದವಸ್ತ್ರೀಯರನ್ನೂ ರಕ್ಷಿಸಿ ಕರೆದುಕೊಂಡು ಹೋಗಬೇಕೆಂದು ಕೃಷ್ಣನು ಹೇಳಿದನು. ಅವರೆಲ್ಲರನ್ನೂ ನಾನು ಕರೆದುಕೊಂಡು ಬರುತ್ತಿರುವಾಗ ದಾರಿಯಲ್ಲಿ ದರೋಡೆಕೋರರ ಗುಂಪೊಂದು ನನಗೆ ಎದುರಾಗಿ ಅವರಿಂದ ಅಪಜಯಕ್ಕೆ ಒಳಗಾದೆನು. ಆಸ್ತಿಯೆಲ್ಲವೂ ದರೋಡೆಕೋರರ ಪಾಲಾಯಿತು. ಸ್ತ್ರೀಯರು ಅಪಮಾನಕ್ಕೊಳಗಾದರು. ಶ್ರೀಕೃಷ್ಣನಿಂದಾಗಿಯೇ 'ನಾನು ಮೂರು ಲೋಕದ ಗಂಡು' ಎಂದು ಮೆರೆದಿದ್ದೆನು. ಶ್ರೀಕೃಷ್ಣನಿಲ್ಲದಿದ್ದರಿಂದ, ದರೋಡೆಕೋರರ ಒಂದು ಸಣ್ಣ ಗುಂಪನ್ನು ಕೂಡ ನಾನು ಎದುರಿಸಲು ಅಸಮರ್ಥನಾದೆನು."

ಹೀಗೆ ಹೇಳಿ ಅರ್ಜುನನು ಮತ್ತಷ್ಟು ದುಃಖಿತನಾದನು. ಅದಕ್ಕೆ ಧರ್ಮರಾಯನು ಅವನಿಗೆ ಹೇಳಿದನು: "ಅರ್ಜುನ, ಶ್ರೀಕೃಷ್ಣನು ಇಲ್ಲದುದರಿಂದಲೇ ನನಗೂ ಇಲ್ಲಿ ಅನೇಕ ಅಪಶಕುನಗಳಾದವು. ನಾಗರಿಕರು ತಮ್ಮ ಕರ್ತವ್ಯವನ್ನು ಮರೆಯುತ್ತಿದ್ದಾರೆ, ವರ್ತಕರು ಅಪ್ರಾಮಾಣಿಕರಾಗುತ್ತಿದ್ದಾರೆ. ಶ್ರೀಕೃಷ್ಣನಿಲ್ಲದ ಈ ರಾಜ್ಯಭೋಗ ನನಗೆ ಬೇಡವೇ ಬೇಡ." ಹೀಗೆಂದು ಹೇಳಿ ಧರ್ಮರಾಯನು ಅಭಿಮನ್ಯುವಿನ ಮಗ ಪರೀಕ್ಷಿತನಿಗೆ ರಾಜ್ಯಪಟ್ಟವನ್ನು ಕಟ್ಟಿದನು. ತನ್ನ ತಮ್ಮಂದಿರೊಡನೆ ವಿರಾಗಿಯಾಗಿ, ನಾರುಮಡಿಯುಟ್ಟುಕೊಂಡು ಧೃತರಾಷ್ಟ್ರನ ಹಾದಿಯನ್ನು ಹಿಡಿದು, ತಾನೂ ಅರಣ್ಯವನ್ನು ಸೇರಿದನು.

ಪಟ್ಟಕ್ಕೆ ಬಂದ ಪರೀಕ್ಷಿತನು ತನ್ನ ಸೋದರಮಾವನ ಮಗಳಾದ ಇರಾವತಿಯನ್ನು ಮದುವೆಯಾದನು. ಅವಳಿಂದ ನಾಲ್ಕು ಮಕ್ಕಳನ್ನು ಪಡೆದನು. ಅವರಲ್ಲಿ ಹಿರಿಯನಾದವನೇ ಜನಮೇಜಯ. ಪರೀಕ್ಷಿತನು ಗಂಗಾನದಿ ತೀರದಲ್ಲಿ ಮೂರು ಅಶ್ವಮೇಧ ಯಾಗಗಳನ್ನು ಮಾಡಿದನು. ರಾಜ್ಯಾಡಳಿತದಲ್ಲಿನ ಲೋಪದೋಷಗಳನ್ನು ಸರಿಪಡಿಸಿದನು. ಧರ್ಮವನ್ನೇ ಆಧಾರವಾಗಿಟ್ಟುಕೊಂಡು ರಾಜ್ಯಪರಿಪಾಲನೆ ಮಾಡಿದನು.